ಪಿಡಬ್ಲ್ಯೂಃ 01.

ದಿನಾಂಕಃ 29-11-2017ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು 4ನೇ ಪ್ರತಿವಾದಿ ಪರ ಶ್ರೀ ಕೆ ಎನ್ ಎಂ ವಕೀಲರಿಂದಃ

1 ರಿಂದ 3ನೇ ಪ್ರತಿವಾದಿಗಳ ಪರ ವಕೀಲರು ಈಗಾಗಲೇ ಮಾಡಿದಂತಹ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ನನ್ನ ಮದುವೆ ಆದರಗ ನನಗೆ 20 ವರ್ಷ ವಯಸ್ಸಾಗಿತ್ತು. ನಮ್ಮ ತಾಯಿ ಊರು ಪಿರಿಯಾಪಟ್ಟಣ ತಾಲ್ಲೂಕು ಬಸಲಾಪುರ ಗ್ರಾಮ, ನಾನು ಹುಟ್ಟಿ ಮದುವೆಯಾಗುವವರೆಗೂ ಬೆಳೆದಿರುವುದು ಬಸಲಾಪುರ ಗ್ರಾಮದಲ್ಲಿ. ನಾನು ಮದುವೆಗೆ ಮುಂಚೆ ನನ್ನ ಯಜಮಾನರ ಮನೆಗಾಗಲೀ ಅವರ ಊರಿಗಾಗಲೀ ನಾನು ಬಂದಿರುವುದಿಲ್ಲ. ನನ್ನ ಮದುವೆಗೆ ಮುಂಚೆ ಏನೇನು ವ್ಯವಹಾರಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಅತ್ತೆ ಮತ್ತು ಮಾವ ಅವರುಗಳಿಗೆ ದಾವಾ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿ ಇದ್ದ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಮ್ಮ ಮಾವನಿಗೆ ಬೇರೆ ಆಸ್ತಿಗಳು ಇದ್ದವು. ನೀಲವಾಗಿಲು ಗ್ರಾಮದ ಸ.ನಂ.32/3 ರಲ್ಲಿ ನನ್ನ ಮಾವನಿಗೆ ಜಮೀನಿದೆ. ಅದು ನನ್ನ ಮಾವನಿಗೆ ಮೋಟಯ್ಯ ರವರಿಂದ ಬಂದಿರುತ್ತದೆ. ಮೋಟಯ್ಯ ನವರು ಪುಟ್ಟಸ್ವಾಮಿಗೆ ತಂದೆ ಆಗಬೇಕು. ಸದರಿ ವಿಚಾರವಾಗಿ ನಾನು ನ್ಯಾಯಾಲಯದ ಮುಂದೆ ದಾಖಲೆ ಹಾಜರ್ಪಡಿಸಿದ್ದೇನೆ. ಮೋಟಯ್ಯರವರಿಂದ ನನ್ನ ಮಾವ ಪುಟ್ಟಸ್ವಾಮಿಗೆ ಬಂದು ನಂತರ 1ನೇ ಪ್ರತಿವಾದಿಗೆ ದಾವಾ ಆಸ್ತಿ ಬಂದಿರುತ್ತದೆ. ನನ್ನ ಮಾವನಿಗೆ ಬೇರೆ ಆಸ್ತಿ ಇದೆ ಎಂದು ಹೇಳಿದ್ದು ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದಿದ್ದಾರೆ. ಇನ್ನೊಂದು ಆಸ್ತಿಯ ಸರ್ವೆ ನಂಬರ್ ಗೊತ್ತಿಲ್ಲ. ನನ್ನ ಮಾವನಿಗೆ 3 ಜನ ಗಂಡು ಮಕ್ಕಳು, ಒಬ್ಬಳು ಮಗಳು.

2ನೇ ವಾದಿ ದಾವಾ ಆಸ್ತಿಯಲ್ಲಿ ಭಾಗ ಕೇಳುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನಿಗೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನಿಗೆ



ಸ್ವಯಾರ್ಜಿತ ಆಸ್ತಿ ಸಹ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಜಯಮ್ಮನವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಜಯಮ್ಮನ ಹೆಸರಿಗೆ ದಾವಾ ಆಸ್ತಿ ಹೇಗೆ ಬಂತು ಎಂದರೆ ಒಟ್ಟು ಕುಟುಂಬದ ಆಸ್ತಿ ಆಗಿರುತ್ತದೆ. ದಾವಾ ಆಸ್ತಿ ಜಯಮ್ಮನಿಗೆ 1984 ರಲ್ಲಿ ಅವರ ತಂದೆ ಕ್ರಯಕ್ಕೆ ತೆಗೆದುಕೊಂಡದಂತಹ ಸ್ವತ್ತು ಎಂದರೆ ಸರಿಯಲ್ಲ. ಸ.ನಂ.37/3 ಒಟ್ಟು ಎಷ್ಟು ವಿಸ್ತೀರ್ಣ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದಿದ್ದಾರೆ. ಜಯಮ್ಮನವರಿಗೆ ಒಟ್ಟು ಎಷ್ಟು ವಿಸ್ತೀರ್ಣದ ಆಸ್ತಿ ಬಂತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದಿದ್ದಾರೆ. ಒಟ್ಟು ವಿಸ್ತೀರ್ಣದ ಚಕ್ಕು ಬಂದಿ ನನಗೆ ಗೊತ್ತಿಲ್ಲ. ಜಯಮ್ಮನಿಗೆ ನಾನು ಮದುವೆಯಾಗಿ ಬಂದ ನಂತರ ಅವರನ್ನು ಮನೆಯಿಂದ ಹೊರಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮಾವ ನನ್ನ ಮದುವೆ ಮುಂಚೆನೇ ತೀರಿಕೊಂಡಿರುತ್ತಾರೆ. ನನ್ನ ಅತ್ತೆ ಅವರ ಹೆಣ್ಣು ಮಕ್ಕಳ ಜೊತೆ ಸೇರಿ ಜೀವನ ಸಾಗಿಸುತ್ತಾ ಬಂದಿರುತ್ತಾರೆಂದರೆ ಸರಿಯಲ್ಲ. ನನ್ನ ಅತ್ತೆ ತೀರಿಕೊಂಡಾಗ ಅವರ ಶವಸಂಸ್ಕಾರವನ್ನು ಅವರ ಹೆಣ್ಣುಮಕ್ಕಳೇ ಮಾಡಿರುತ್ತಾರೆಂದರೆ ಸಾಕ್ಷಿಯು ನಮಗೆ ಗೊತ್ತಾಗದ ಹಾಗೆ ಮಾಡಿರುತ್ತಾರೆ ಎಂದಿದ್ದಾರೆ.

ದಾವಾ ಆಸ್ತಿ 16/10/1984 ನೇ ಸಾಲಿನಲ್ಲಿ ನನ್ನ ಅತ್ತೆ ಜಯಮ್ಮನವರ ಹೆಸರಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಕೆಂಪೇಗೌಡ ಉಃ ಮೋಟೇಗೌಡ ರವರ ಹೆಂಡತಿ ಪುಟ್ಟಮ್ಮ ಅವರ ಹೆಣ್ಣು ಮಕ್ಕಳಾದಂತಹ ಪುಟ್ಟೇಗೌಡರ ಹೆಂಡತಿ ಅಕ್ಕಯ್ಯಮ್ಮ , ಗೋವಿಂದೇಗೌಡರ ಹೆಂಡತಿ ಜಾನಕಮ್ಮ ಅವರು ಸೇರಿ 1ನೇ ಪ್ರತಿವಾದಿಗೆ ಕ್ರಯ ಪತ್ರದ ಮುಖಾಂತರ ಬರೆದುಕೊಟ್ಟ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿ ನನ್ನ ಅತ್ತೆಯ ಪರವಾಗಿ ಅವರ ತಂದೆ 7 ಸಾವಿರ

ರೂಪಾಯಿಗಳನ್ನು ಕೊಟ್ಟು ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿ ಖರೀದಿಸುವಾಗ ಅದರ ವಿಸ್ತೀರ್ಣ 3 ಎಕರೆ 23 ಗುಂಟೆ ಎಂದರೆ ಸರಿಯಲ್ಲ. ನನ್ನ ಅತ್ತೆಗೆ ನಾನು ಮನೆಯಿಂದ ಹೊರಗೆ ಹಾಕಿದ ನಂತರ ಅವರಿಗೆ ನೋಡಿಕೊಳ್ಳಲು ಯಾರೂ ಇಲ್ಲದ



ಕಾರಣ ಸದರಿ ಆಸ್ತಿಯನ್ನು ಅವರು 8/1/2003 ರಂದು ಮೈದುನನಹಳ್ಳಿ ಗ್ರಾಮದ ಕುಳ್ಳವೆಂಕಟೇಗೌಡರ ಮಗ ವೆಂಕಟರಮಣನಿಗೆ ನೊಂದಾಯಿತ ಭೋಗ್ಯ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ಕರ್ನಾಟಕ ಬ್ಯಾಂಕಿನಲ್ಲಿ ಮಾಡಿದಂತಹ ಸಾಲ ತೀರಿಸಲು ಮತ್ತು ಅವರ ಔಷದಿಗೋಸ್ಕರ 80 ಸಾವಿರ ರೂಗಳಿಗೆ ಭೋಗ್ಯ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಅತ್ತೆ ನಮಗೆ ಯಾವ ವಿಚಾರವನ್ನು ಸಹ ಹೇಳುತ್ತಿರಲಿಲ್ಲ ಎಂದಿದ್ದಾರೆ. ಸದರಿ ಭೋಗ್ಯ ಪತ್ರದ ಪ್ರಕಾರ 8 ವರ್ಷಗಳ ಕಾಲ ಭೋಗ್ಯಕ್ಕೆ ಬಿಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ ಭೋಗ್ಯ ಪತ್ರದ ಆಧಾರದ ಮೇಲೆ ವೆಂಕಟರಮಣೇಗೌಡ ಇವರಿಗೆ ಆಸ್ತಿಯ ಸ್ವಾಧೀನವನ್ನು ವಹಿಸಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಭೋಗ್ಯ ಮಾಡಿದ್ದು 2 ಎಕರೆ 9 ಗುಂಟೆ ಜಮೀನಿಗೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವೆಂಕಟರಮಣೇಗೌಡ ಎಂದರೆ ಈ ದಾವೆಯ 4ನೇ ಪ್ರತಿವಾದಿಯ ತಂದೆ ಎಂದರೆ ನನಗೆ ಗೊತ್ತಿಲ್ಲ. ಭೋಗ್ಯದ ಅವಧಿ ಮುಗಿದ ನಂತರ ನಮ್ಮ ಯಜಮಾನರಾಗಲೀ, ನನ್ನ ಮೈದುನನಾಗಲೀ, ಬೋಗ್ಯವನ್ನು ಬಿಡುಗಡೆ ಮಾಡಲು ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಅತ್ತೆಯೇ ಎಲ್ಲ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದಿದ್ದಾರೆ. ನನ್ನ ಅತ್ತೆಗೆ ವಯಸ್ಸಾಗಿದ್ದ ಕಾರಣ ಎಲ್ಲಾ ವ್ಯವಹಾರವನ್ನು ನನ್ನ ಯಜಮಾನರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತೆ ಯಾವಾಗಲೂ ನಮ್ಮ ಮನೆಯ ವ್ಯವಹಾರ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. 2013 ನೇ ಸಾಲಿನಲ್ಲಿ ಭೋಗ್ಯದ ಹಣ ತೀರಿಸಲು ಆಗದ ಕಾರಣ ದಿಃ 21/5/2013 ರಲ್ಲಿ 4ನೇ ಪ್ರತಿವಾದಿಗೆ ನನ್ನ ಅತ್ತೆ ದಾವಾ ಆಸ್ತಿಯನ್ನು ಅವರ ಕಾನೂನಿನ

ಅವಶ್ಯಕತೆಗೋಸ್ಕರ ಹಾಗೂ ಭೋಗ್ಯದ ಹಣ ಬಿಡುಗಡೆಗೋಸ್ಕರ ಮತ್ತು ಅನಾರೋಗ್ಯದ ಚಿಕಿತ್ಸೆಗಾಗಿ ದಾವಾ ಸ್ವತ್ತನ್ನು ಕ್ರಯಕ್ಕೆ ಮಾಡಿದ್ದಾರೆಂದರೆ ಸಾಕ್ಷಿಯು ನಮಗೆ ಗೊತ್ತಾಗದ ರೀತಿ ಮಾಡಿದ್ದಾರೆ ಎಂದಿದ್ದಾರೆ. ಮಾರಾಟ ಆದ ನಂತರ ನಾವು ದಾವಾ ಆಸ್ತಿ ನಮಗೂ ಬರಬೇಕೆಂದು ಈ ಸುಳ್ಳು ದಾವೆಯನ್ನು ಹೂಡಿದ್ದೇವೆಂದರೆ ಸರಿಯಲ್ಲ. ನಾವು ದಾವಾ



ಆಸ್ತಿಯ ಸ್ವಾಧೀನಾನುಭವದಲ್ಲಿ ಇರಲಿಲ್ಲ. ದಾವಾ ಆಸ್ತಿಯ ಪೈಕಿ ನನ್ನ ಅತ್ತೆ 1 ಎಕರೆ ಜಮೀನನ್ನು ಸಿದ್ದಪ್ಪನವರ ಮಗ ರಮೇಶನಿಗೆ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ 1 ಎಕರೆ ಆಸ್ತಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟಪೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.